ISSN: 2249-2429 Volume : 9, Issue : 4, Pages 52, 7th March. 2020 Annual Subscription ₹.75

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

**SHIKSHAN SOUDHA** *A Quarterly Education and Research Journa*


Approved by the U.G.C Care List Serial No. 22

APPROVED BY UGC

J.P. COLLEGE OF EDUCATION GADAG 582101

PRINCIPAL
J.P. College of Education
GADAG-582101

## ದೇಶದ ವಾಣಿಜ್ಯ ತಿಳುವಳಿಕೆ ಮತ್ತು ನಿರುದ್ಯೋಗದ ಪರಿಹಾರ



## ಬಸವಣ್ಣನವರ ವಚನಗಳಲ್ಲಿ ಲೋಕ ಶಿಕ್ಷಣ ಒಂದು ವಿಶ್ಲೇಷಣಾತ್ಮಕ ಅಧ್ಯಯನ



## ಕನ್ನಡ ಸಾಹಿತ್ಯದಲ್ಲಿ ಮೊಬೈಲ್ ಅಪ್ಲಿಕೇಷನ್‌ಗಳ ಪಾತ್ರ

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

Approved by the U.G.C. Care List Serial No.: 221

7ನೇ ಮಾರ್ಚ 2020 ಸಂಪುಟ : 9 ಸಂಚಿಕೆ : 4

ಪ್ರಕಾಶಕರು :

ಜಯದೇವ ಮೈ. ಮೆಣಸಗಿ

ವಿದ್ಯಾನಿಧಿ ಪ್ರಕಾಶನ, ಗದಗ

ಮಾಜಿ ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಸಂಪಾದಕರು :

ಡಾ. ಎನ್. ಬಿ. ಕೊಂಗವಾಡ

ಸಹಸಂಪಾದಕರು :

ಡಾ. ಎಸ್. ಬಿ. ಯಾದವಾಡ

ಸಂಪಾದಕ ಮಂಡಳಿ :

- ಡಾ. ಶ್ರೀಮತಿ ಎನ್. ಲಕ್ಷ್ಮಿ
  ಡೀನ್ ಶಿಕ್ಷಣ ನಿಕಾಯ ಕರಾಮುವಿ, ಮೈಸೂರು.
- ಡಾ. ಎಸ್. ಎಸ್. ಪಾಟೀಲ
  ಡೀನ್ ಶಿಕ್ಷಣ ನಿಕಾಯ ಕುವೆಂಪು ವಿ.ವಿ. ಶಿವಮೊಗ್ಗ
- ಡಾ. ಎ. ವ್ಹಿ. ಬಮಗೊಂಡ
  ಬಿ.ಎಲ್.ಡಿ.ಇ. ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ
- ಡಾ. ಶ್ರೀಮತಿ ಶೋಭಾ ನಾಯ್ಕರ
  ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಬೆಳಗಾವಿ.
- ಡಾ. ಬಿ. ಎಲ್. ಲಕ್ಕಣ್ಣವರ
  ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ
- ಡಾ. ಜಗನ್ನಾಥ್ ಕೆ. ಢಾಂಗೆ
  ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ.

**Shikshan Soudha**

*A Quarterly Education and Research Journal*

Vidyanidhi Prakashana ®
Sri Sivakumar Agency ®
Station Road, Near Mahendrakar Circle,
GADAG-582 101 Dist. : Gadag
Karnataka State (India)
Phone : 08372-237527, 277527
email : shikshansoudha@gmail.com

The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.

ಶಿಕ್ಷಣ ಸೌಧ

ಯು.ಜಿ.ಸಿ.ಯಿಂದ ಮಾನ್ಯತೆ ಪಡೆದ ಸಂಖ್ಯೆ : 221

## ಅಂತರಂಗ Inside

### ಸೈದ್ಧಾಂತಿಕ (Articles)

05 ಅಂಬೇಡ್ಕರ್ ಮತ್ತು ಹಿಂದೂ ಕೋಡ್‌ಬಿಲ್ – ಡಾ. ಯರ್ರಿಸ್ವಾಮಿ ಈ.

10 ಯಾತರದ ಹೂವೇನು । ನಾತವಿದ್ದರೆ ಸಾಕು – ವೀರಭದ್ರಯ್ಯ ಹಿರೇಮಠ

13 ಲಾವಣಿ ಹಾಗೂ ಗೀ ಗೀ ಸಾಹಿತ್ಯ – ಡಾ. ರಾಜು ಕಂಬಾರ

14 ದೇಶದ ವಾಣಿಜ್ಯ ತಿಳುವಳಿಕೆ ಮತ್ತು ನಿರುದ್ಯೋಗದ ಪರಿಹಾರ – ವೆಂಕಟೇಶ ನಾಯಕ್ ಮಂಗಳೂರು

16 ಕಾರ್ಮಿಕರನ್ನು ಸಶಕ್ತಗೊಳಿಸಿ ? – ಡಾ. ಸುರೇಶ ಕೆ.ಪಿ.

18 ಕರಾವಳಿ ಜನಪದ ನ್ಯಾಯಪದ್ಧತಿ – ಡಾ. ಸೋಮಣ್ಣ ಹೊಂಗಳ್ಳಿ

24 ಕನ್ನಡ ಸಾಹಿತ್ಯದಲ್ಲಿ ಮೊಬೈಲ್ ಅಪ್ಲಿಕೇಷನ್‌ಗಳ ಪಾತ್ರ – ಸೋಮಶೇಖರ ಎಂ., ಡಾ. ಜಗನ್ನಾಥ ಕೆ. ಡಾಂಗೆ

### ಸಂಶೋಧನೆಗಳು (Research Articles)

26 ಬಸವಣ್ಣನವರ ವಚನಗಳಲ್ಲಿ ಲೋಕ ಶಿಕ್ಷಣ ಒಂದು ವಿಶ್ಲೇಷಣಾತ್ಮಕ ಅಧ್ಯಯನ – ಬಿ.ಬಿ.ಹೊಳಗುಂದಿ, ಡಾ. ಜಿ.ಆರ್. ಅಂಗಡಿ

30 ಸ್ನಾತಕ ಪದವಿ ಹಂತದ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರು ಹಾಗೂ ಸ್ವಯಂ ಸೇವಕರಲ್ಲದ ವಿದ್ಯಾರ್ಥಿಗಳ ನಡುವಿನ ಪರಿಸರ ಜಾಗೃತಿಯ ಹೋಲಿಕಾ ಅಧ್ಯಯನ – ಶ್ರೀನಿವಾಸ ಮಾಣಿಕರಾವ್, ಡಾ. ಡಿ.ಹೆಚ್. ಜಗದೀಶ

34 ಜಾಗತೀಕರಣದಲ್ಲಿ ಉನ್ನತ ಶಿಕ್ಷಣದ ಸಾಧ್ಯತೆ ಹಾಗೂ ಸವಾಲುಗಳು – ಡಾ. ಶರಣಪ್ಪ ಸೈದಾಪೂರ

39 ದಾವಣಗೆರೆಯಲ್ಲಿ ಮಂಡಕ್ಕಿ ತಯಾರಿಕೆ ಉದ್ಯಮ – ಹರೀಶ ತಿಗರಿ, ಡಾ. ಕನ್ನಕಟ್ಟೆ ಜಯಣ್ಣ

46 ಗ್ರಾಮ ಪಂಚಾಯತ ಪರಿಶಿಷ್ಟ ಜಾತಿ ಸದಸ್ಯರ ಸಾಮಾಜಿಕ ಆರ್ಥಿಕ ಹಿನ್ನಲೆ ಒಂದು ಸಮಾಜಶಾಸ್ತ್ರೀಯ ಅಧ್ಯಯನ – ಕಾಂಬಳೆ ರಾಜು ವಸಂತ, ಡಾ. ಶ್ಯಾಮಲಾ ಭೀ. ದಾಸೋಗ

51 ಹೈದ್ರಾಬಾದ ಕರ್ನಾಟಕದ ಆಯ್ದ ಕಥೆಗಾರರಾದ ಅಮರೇಶ್ ನುಗಡೋಣಿಯವರ ಆಯ್ದ ಕಥೆಗಳಲ್ಲಿನ ತಂತ್ರ, ಶೈಲಿ, ವಸ್ತುವೈವಿಧ್ಯತೆ ಮತ್ತು ಭಾಷಾ ವೈಶಿಷ್ಟ್ಯ – ಬಿ. ವಿಜಯ ರಾಜೇಂದ್ರ, ಡಾ. ನಾಗಣ್ಣ ಕಿಲಾರಿ

### ಶಿಕ್ಷಣ ತಜ್ಞರು (Educationists)

55 ಸ್ವಾಭಿಮಾನಿ ಡಾ. ಎಸ್. ರಾಧಾಕೃಷ್ಣನ್ – ಡಾ. ಎಸ್.ಬಿ. ದಳವಾಯಿ, ಪ್ರೊ. ಆರ್.ಎನ್. ಶೆಟ್ಟರ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# "ಬಸವಣ್ಣನವರ ವಚನಗಳಲ್ಲಿ ಲೋಕ ಶಿಕ್ಷಣ ಒಂದು ವಿಶ್ಲೇಷಣಾತ್ಮಕ ಅಧ್ಯಯನ"

✍ ಬಿ.ಬಿ. ಹೊಳಗುಂದಿ, ಸಂಶೋಧನಾ ವಿದ್ಯಾರ್ಥಿ ಹಾಗೂ ಸಹಾಯಕ ಪ್ರಾಧ್ಯಾಪಕರು, ಜಗದ್ಗುರು ಪಂಚಾಚಾರ್ಯ ಶಿಕ್ಷಣ ಮಹಾವಿದ್ಯಾಲಯ, ಗದಗ.

✍ ಡಾ. ಜಿ.ಆರ್. ಅಂಗಡಿ, ಸಂಶೋಧನಾ ಮಾರ್ಗದರ್ಶಕರು ಹಾಗೂ ಸಹ ಪ್ರಾಧ್ಯಾಪಕರು, ಸ್ಕೂಲ್ ಆಫ್ ಎಜುಕೇಶನ್ ಗುಜರಾತ, ಕೇಂದ್ರೀಯ ವಿಶ್ವವಿದ್ಯಾಲಯ, ಗಾಂಧೀನಗರ, ಗುಜರಾತ.

ತಿರುಳು

ಧಾರ್ಮಿಕ ಕ್ರಿಯಾಚರಣೆ ಮಾಡುವುದು ಒಂದು ಲೋಕ ಶಿಕ್ಷಣ. ಲೋಕ ಶಿಕ್ಷಣ ಬಯಸುವ ವ್ಯಕ್ತಿ ಮೊದಲು ಆತ್ಮಾವಲೋಕನ ಮಾಡಿಕೊಳ್ಳಬೇಕು ಇಂದು ಲೋಕ ಕಲ್ಯಾಣಕ್ಕಿಂತ ಮುಖ್ಯವಾಗಿ ಆಗಬೇಕಾದ್ದು ವ್ಯಕ್ತಿ ಕಲ್ಯಾಣ ಅದಕ್ಕೆ ಬೇಕಾದುದು ಕಾಯಕ. ಪ್ರತಿಯೊಬ್ಬರು ಯಾವುದಾದರೊಂದು ಕಾಯಕದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಇದರ ಮೂಲಕ ಸಕಲ ಜೀವಿಗಳ ಒಳಿತನ್ನು ಬಯಸಬೇಕು. ಸರಳ ಜೀವನದ ಮೂಲಕ ಉನ್ನತ ತತ್ತ್ವದ ವಿಚಾರಗಳನ್ನು ಅಳವಡಿಸಿಕೊಂಡು ತನ್ನಂತೆ ಇತರರನ್ನು ಕಾಣುವ ಹೃದಯ ಶ್ರೀಮಂತಿಕೆಯನ್ನು ಬೆಳೆಸಿಕೊಳ್ಳಬೇಕು ಇದರಲ್ಲಿ ಪ್ರಕೃತಿ ಪ್ರೇಮ, ಜೀವನ ಪ್ರೀತಿ ಇದ್ದಾಗ ಮಾತ್ರ ಲೋಕ ಕಲ್ಯಾಣ ಸಾಧ್ಯವಾಗುವುದು. ಲೋಕ ಕಲ್ಯಾಣಕ್ಕಾಗಿ ಇಂದು ಭ್ರಷ್ಟಾಚಾರದಿಂದ ಮುಕ್ತರಾಗಬೇಕು. ಅಜ್ಞಾನ, ಅವಿವೇಕ, ಮೌಢ್ಯಗಳನ್ನು ತೊಡೆದು ಹಾಕಬೇಕು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕು. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರು ಯಾವತ್ತು ಸತ್ಯದ ಹಾದಿ ಬಿಟ್ಟು ನಡೆದವರಲ್ಲ ಅವರು ಅಂತರಂಗ ಬಹಿರಂಗ ಶುದ್ಧಿಯ ಮೂಲಕ ಪರಮಾತ್ಮನನ್ನು ಒಲಿಸಲು ಕಂಡುಕೊಂಡ ಸರಳವಾದ ದಾರಿ ಇದು. ನಮ್ಮಲ್ಲಿ ಎರಡು ರೀತಿಯ ಶಿಕ್ಷಣವಿದೆ ಒಂದು ಶಾಲೆಗಳಿಂದ ಔಪಚಾರಿಕ ಶಿಕ್ಷಣವಾದರೆ ಇನ್ನೊಂದು ಅನುಭವದಿಂದ ಪಡೆಯುವ ಅನೌಪಚಾರಿಕ ಶಿಕ್ಷಣವಾಗಿದೆ. ಔಪಚಾರಿಕ ಶಿಕ್ಷಣ ಅಕ್ಷರಗಳನ್ನು ಕಲಿಸಿ ಬುದ್ಧಿಯನ್ನು ಬೆಳೆಸಿ ಪದವಿಯನ್ನು ಪಡೆಯಲು ಸಹಾಯಕವಾಗುತ್ತದೆ ಹೊರತು ಅರಿವು ನೀಡುವುದಿಲ್ಲ. ಶಿಕ್ಷಣವು ಇಂದು ಅರಿವನ್ನು ಹೆಚ್ಚಿಸಬೇಕಾಗಿದೆ. ತಾತ್ತ್ವಿಕ ತಳಹದಿಯ ಮೇಲೆ ಅನುಭವ ಮಂಟಪ ಸ್ಥಾಪಿಸುವ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಹೆಚ್ಚು ಒತ್ತು ನೀಡಿ ಅನುಭವ ಮಂಟಪದಲ್ಲಿ ಶೋಷಿತ ಜನರನ್ನು ಗುರುತಿಸಿ ಅವರ ವ್ಯಕ್ತಿತ್ವ ವಿಕಾಸವಾಗುವಂತೆ ಮಾಡಿದರು. ಇದರಿಂದ ಶರಣರು ಅನುಭಾವಿಗಳಾದರು. ಇಂತಹ ಅನುಭಾವಾತ್ಮಕ, ಮೌಲ್ಯಾಧಾರಿತ ಶಿಕ್ಷಣ ನಮ್ಮ ಮಕ್ಕಳಿಗೆ ದೊರೆಯುತ್ತಿಲ್ಲ. ಆದುದರಿಂದ ಬಸವಣ್ಣನವರ ವಚನಗಳ ಮೂಲಕ ಲೋಕ ಶಿಕ್ಷಣವನ್ನು ಪಡೆದುಕೊಳ್ಳಬಹುದಾಗಿದೆ.

ಪ್ರಮುಖ ಪದಗಳು

ಬಸವಣ್ಣನವರ ವಚನಗಳು, ಸಾಮಾಜಿಕ, ಆರ್ಥಿಕ, ಧಾರ್ಮಿಕ, ನೈತಿಕ, ಶೈಕ್ಷಣಿಕ, ಲೋಕ, ಶಿಕ್ಷಣ, ನಡೆ-ನುಡಿ, ಮಾನವೀಯತೆ, ಕಾಯಕ, ದಾಸೋಹ.

## ಪ್ರಸ್ತಾವನೆ

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಚನ ಸಾಹಿತ್ಯಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಶೋಷಿತರು ಕೆಳವರ್ಗದ ಜನರು ಮೊದಲ ಬಾರಿಗೆ ಸಾಹಿತ್ಯದ ಮೂಲಕ ಮಾತನಾಡಿದ್ದು ಇದೇ ಮೊದಲಾಗಿದೆ. ಅರಮನೆಯಿಂದ ಹೊರಬಂದು, ರಾಜಾಶ್ರಯದಿಂದ ದೂರ ಸರಿದು, ಪಂಡಿತರಿಂದ ಪಾರಾಗಿ ಸಹಜವಾಗಿ ಉಸಿರಾಡಿದ್ದು ಈ ನೆಲದಲ್ಲಿ ವಚನಕಾರರಿಂದ ಸಾಧ್ಯವಾಗಿದೆ. ಜಾತಿ-ಮತ, ದೇಶ-ಭಾಷೆ ಹಾಗೂ ವಯಸ್ಸಿನ ಅಂತರ ಮರೆತು ಜನಸಾಮಾನ್ಯರು ಕೂಡ ವಚನ ಸಾಹಿತ್ಯದ ಕೃಷಿಯಲ್ಲಿ ತೊಡಗಿದ್ದು ಇಲ್ಲಿ ಪ್ರಮುಖವಾಗಿದೆ. ಇಲ್ಲಿ ಸಾಹಿತ್ಯ ರಾಜಾಶ್ರಯದೊಂದಿಗೆ ಪಂಡಿತರಿಗೆ ಮಾತ್ರ ಸೀಮಿತವಾಗಿತ್ತು. ಬಸವಾದಿ ಶರಣರು ವಚನ ಸಾಹಿತ್ಯವನ್ನು ಸರಳವಾಗಿ ರಚಿಸುವುದರ ಮೂಲಕ ಜನಮಾನಸಕ್ಕೆ ನಿಲುಕುವ ಹಾಗೆ ಸರಳ ಸುಂದರ ಹಾಗೂ ಅರ್ಥ ಗರ್ಭಿತವಾಗಿ ವಚನಗಳನ್ನು ರಚಿಸಿ ಅದರ ಮೂಲಕ ಸಾಮಾಜಿಕ ಬದಲಾವಣೆ ತಂದಿದ್ದಾರೆ. ಶರಣರು ನಡೆ-ನುಡಿಗಳ ಮೂಲಕ ಹೊಸ ಸಂದೇಶಗಳನ್ನು ನೀಡುತ್ತಾ ಸಾಮಾನ್ಯರ ಬದುಕನ್ನು ಸಾಗಿಸಲು ಸಮಾಜಕ್ಕೆ ನೀಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಲೋಕ ಎಂಬ ಶಬ್ದದ ಅರ್ಥವು ವಿಶ್ವ, ಪ್ರಪಂಚ, ಭೂಮಿ, ಮಾನವಕುಲ, ಮನುಷ್ಯ ಸಮುದಾಯ, ನಡವಳಿಕೆ, ಸಾಮಾನ್ಯ ಜನತೆ, ಪ್ರಜೆ ಎಂಬ ಅರ್ಥಗಳಿವೆ. ಸ್ವಾಮಿ ವಿವೇಕಾನಂದರ ಪ್ರಕಾರ ಶಿಕ್ಷಣವು ವ್ಯಕ್ತಿಯಲ್ಲಿ ಸುಪ್ತವಾಗಿರುವ ದೈವತ್ವವನ್ನು ಹೊರಸೆಳೆಯುವುದೇ ಶಿಕ್ಷಣ. ಶಿಕ್ಷಣವು ಸರ್ವ ರೋಗಗಳಿಗೆ ಔಷಧಿಯಾಗಿದ್ದರೂ ಇಲ್ಲಿಯೂ ಕೂಡ ಹಲವಾರು ಸಮಸ್ಯೆಗಳಿವೆ. ಶಿಕ್ಷಣದಿಂದ ಸಕಲ ಜೀವ ಮತ್ತು ಅಜೀವ



ಜಗತ್ತಿನ ಜೊತೆಗೆ ಮನುಕುಲದ ಅಭಿವೃದ್ಧಿಯಾಗಬೇಕಾಗಿದೆ. ಇಂತಹ ಆಶಾದಾಯಕ ಒಳನೋಟಗಳನ್ನು ದಾರ್ಶನಿಕರು ಮತ್ತು ವಚನಕಾರರು ಗುರುತಿಸಿರುವುದರಿಂದ ಅವುಗಳನ್ನು ಸರಿಯಾಗಿ ಆಲೋಚಿಸುವ ಅಗತ್ಯತೆ ಇದೆ.

ಅಕ್ಷರ, ಅರಿವು ಹಾಗೂ ಸಂಸ್ಕಾರ ಇವು ನಮ್ಮ ಜೊತೆಯಲ್ಲಿದ್ದಾಗ ವ್ಯಕ್ತಿ ಸತ್ಪ್ರಜೆಯಾಗುವನು ಸಾಮಾಜಿಕವಾಗಿ ಉಪಯುಕ್ತವಾದ ಸಕಲ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವನು ಪ್ರಸ್ತುತ ನಮ್ಮ ಶಿಕ್ಷಣದಲ್ಲಿ ಇಂತಹ ಸಂಸ್ಕಾರವಿಲ್ಲ. ಇಂದು ಶಿಕ್ಷಣಕ್ಕೆ ವಿಶೇಷ ಒತ್ತು ನೀಡುತ್ತಿದ್ದರೂ ಮಕ್ಕಳಲ್ಲಿ ಮೌಲ್ಯಗಳು ಅಳವಡಿಕೆಯಾಗಿಲ್ಲ. ಅವರು ಪಡೆಯುವ ಶಿಕ್ಷಣ ಲೌಕಿಕವಾಗಿದ್ದು ಅದರಿಂದ ಉದ್ಯೋಗ ಪಡೆದು ಹೆಚ್ಚು ಸಂಪಾದನೆ ಮಾಡುವುದರ ಮೂಲಕ ವಂಚನೆಯ ದಾರಿಗಳನ್ನು ಹಿಡಿಯುವುದು ಮಾತ್ರ ಆಗಿತ್ತು. ಅಲೌಕಿಕ ಶಿಕ್ಷಣದ ಮೂಲಕ ನೈತಿಕ ನೆಲೆಗಟ್ಟನ್ನು ರೂಪಿಸಿಕೊಳ್ಳಲು ಇನ್ನು ಸಾಧ್ಯವಾಗಿಲ್ಲ. ಉತ್ತಮ ವ್ಯಕ್ತಿತ್ವ ನಿರ್ಮಾಣದ ಶಿಕ್ಷಣ ಸಿಗುತ್ತಿಲ್ಲ ಹಾಗಾಗಿ ಮಾನವನು ದೈಹಿಕ, ಮಾನಸಿಕ, ನೈತಿಕ ಹಾಗೂ ಆಧ್ಯಾತ್ಮಿಕವಾಗಿ ಬಲಿಷ್ಠನಾಗಲು ಶರಣರು ಹಾಕಿಕೊಂಡ ಸಾಮಾಜಿಕ ಬದುಕಿನ ಸತ್ಯವನ್ನು ಅರಿತು ಉತ್ತಮ ಹಾದಿಯಲ್ಲಿ ಸಾಗಬೇಕು ಇದು ಶರಣರು ಕಂಡುಕೊಂಡ ಲೋಕ ಶಿಕ್ಷಣವಾಗಿದೆ. ಶರಣರ ಸಾಮಾಜಿಕ ಬದುಕು ಕೂಡಾ ಒಂದು ಲೋಕ ಶಿಕ್ಷಣವಾಗಿದೆ.

ವಿಶ್ವದ ವಿಭೂತಿ ಪುರುಷರ ಮೊದಲನೆಯ ಸಾಲಿನಲ್ಲಿ ನಿಲ್ಲುವ ವ್ಯಕ್ತಿತ್ವ ಯುಗ ಪುರುಷ, ಭಕ್ತಿ ಬಂಡಾರಿ, ಕ್ರಾಂತಿಕಾರಿ, ಶರಣ ಸಂಸ್ಕೃತಿಯ ಜನಕ, ಜಗತ್ತು ಕಂಡ ಒಬ್ಬ ಅಪರೂಪದ ಮಹಾನ್ ಸಮಾಜ ಸುಧಾರಕ ಬಸವಣ್ಣನವರು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

"ಇವನಾರವ, ಇವನಾರವ, ಇವನಾರವ ? ನೆಂದೆನಿಸದಿರಯ್ಯಾ
ಇವ ನಮ್ಮವ, ಇವ ನಮ್ಮವ ಇವ ನಮ್ಮವ ನೆಂದೆನಿಸಯ್ಯಾ.
ಕೂಡಲ ಸಂಗಮದೇವಾ, ನಿಮ್ಮ ಮನೆಯ ಮಗನೆನಿಸಯ್ಯಾ"

ಎನ್ನುವ ವಚನದ ಮೂಲಕ ವರ್ಗಭೇದ, ವರ್ಣಭೇದ ಹಾಗೂ ಲಿಂಗಭೇದಗಳನ್ನು ತೊಡೆದು ಹಾಕಿ ವಿಶ್ವದ ಮನುಕುಲ ಒಂದೇ ಎಂದು ಸಾರಿ ಹೇಳುವ ಸಂದೇಶವಿದು. ಸ್ವಾತಂತ್ರ್ಯ ಸಮಾನತೆ ಬಂಧುತ್ವ ಹಾಗೂ ಜಾತ್ಯಾತೀತತೆಯಂತ ಸಂವಿಧಾನಿಕ ಶ್ರೇಷ್ಠತೆಯ ಸಾಲಿನಲ್ಲಿ ಬಸವಾದಿ ಶರಣರು ಪ್ರಮುಖರಾಗಿದ್ದಾರೆ.

ಇಂದು ಜಗತ್ತಿನಾದ್ಯಂತ ಶಿಕ್ಷಣ ವಿಷಯ ಕುರಿತು ಹೆಚ್ಚು ಚರ್ಚೆ ಗೋಷ್ಠಿ ಸಂಶೋಧನೆ ಹಾಗೂ ಚಳುವಳಿ ನಡೆಯುತ್ತಿವೆ. ಶಿಕ್ಷಣಕ್ಕೆ ಸಂಬಂಧಿಸಿದ ಹಲವಾರು ಸಮಸ್ಯೆಗಳಿಂದ ಇಡೀ ವಿಶ್ವವೇ ವಿನಾಶದ ಅಂಚಿನತ್ತ ಸಾಗುತ್ತಲಿದೆ. ದಾರ್ಶನಿಕರು, ವಿಜ್ಞಾನಿಗಳು, ಶೈಕ್ಷಣಿಕ ಚಿಂತಕರು ಎಚ್ಚರಿಕ್ಕೆಯ ಗಂಟೆಯನ್ನು ಬಾರಿಸುತ್ತಾ ಬಂದಿದ್ದಾರೆ. ಇಂತಹ ಎಚ್ಚರಿಕೆಗಳು ನಮ್ಮ ಮನಸ್ಸಿನ ಮೇಲೆ ಪರಿಣಾಮ ಬೀರಿ ಹೃದಯ ಮತ್ತು ಮನಸ್ಸು ಪರಿವರ್ತನೆಯಾಗಿ ಸಮಸ್ಯೆಗಳು ಈಗಾಗಲೇ ಪರಿಹಾರವಾಗಬೇಕಿತ್ತು ಆದರೆ ಇನ್ನೂ ಆಗಿಲ್ಲ ಇಂತಹ ಭಯಾನಕ ಸ್ಥಿತಿಗೆ ಕಾರಣಗಳನ್ನು ಹುಡುಕುವುದು ಒಂದು ಸಮಸ್ಯೆಯಾಗಿದೆ. ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆ ಜನಾಂಗೀಯ ಕಲಹಗಳ ಜೊತೆಗೆ ಮಾನವ ಸಂಪನ್ಮೂಲಗಳ ದುರ್ಬಳಕೆ ಆಗುತ್ತಲಿದೆ. ಇಂತಹ ಕ್ಷೇತ್ರಗಳಲ್ಲಿ ಶಿಕ್ಷಣ ತಜ್ಞರು ಹಾಗೂ ಸಮಾಜ ಚಿಂತಕರು ಗಂಭೀರವಾಗಿ ಪರಿಹಾರ ಹುಡುಕುತ್ತಿದ್ದರೂ ಕೂಡ ಅದು ಇಂದಿಗೂ ಸಾಧ್ಯವಾಗುತ್ತಿಲ್ಲ.

ಲೋಕ ಜೀವನದ ಬಹುಮುಖವನ್ನು, ಮಾನವ ಸ್ವಭಾವದ ವೈಪರಿತ್ಯಗಳನ್ನು ಕಾಣುವ ಮನಸ್ಸು ಸಹಜವಾಗಿಯೇ ವಿಚಾರಶೀಲವಾಗುತ್ತದೆ. ಶರಣರ ವಚನಗಳಲ್ಲಿ ಮುಖ್ಯವಾಗಿ ಕಂಡು ಬರುವ ಗುಣ ವೈಚಾರಿಕತೆ ಶರಣರು ಭಕ್ತಿಯ ಭಾವದಲ್ಲಿ ಕರಗುವುದಿಲ್ಲ ಯಾವುದೇ ಆದರ್ಶದ ಪರಿಸರದಲ್ಲಿ ತನ್ಮಯವಾಗಿ ಇಲ್ಲಿರುವ ಸತ್ಯವನ್ನು ಕಡೆಗಣಿಸುವುದಿಲ್ಲ ಸಮಕಾಲೀನ ಸಮಾಜದಲ್ಲಿ ವಿಚಾರದ ನೆಲೆಗಟ್ಟಿನ ಮೇಲೆ ನಿಂತು ತಮ್ಮ ಅನುಭವದ ಹೊಸ ಕಿರಣಗಳನ್ನು ಬೀರಿದ್ದಾರೆ. ಹಾಗಾಗಿ ವೈಚಾರಿಕ ಮತ್ತು ಸಾಮಾಜಿಕ ಪ್ರಜ್ಞೆಗಳು ದಟ್ಟವಾಗಿ ಹಬ್ಬಿವೆ. ಇಪ್ಪತ್ತೊಂದನೆಯ ಶತಮಾನದ ವೈಜ್ಞಾನಿಕ ಸಾಧನೆಗಳನ್ನು ತಿಳಿದಿರುವ ಹಾಗೂ ತಾತ್ವಿಕ ಚಿಂತನೆಯ ಮೂಲಕ ಶ್ರೀಮಂತವಾದ ವಿಚಾರಶೀಲ ಮನಸ್ಸು ವಚನ ಸಾಹಿತ್ಯವನ್ನು ಯಾವ ರೀತಿ ವಿಚಾರಶೀಲವಾಗಿಸಬಹುಧಾಗಿದೆ ಎನ್ನುವುದಕ್ಕೆ ಹಲವಾರು ನಿದರ್ಶನಗಳು ಇಲ್ಲಿ ಸಿಗುತ್ತವೆ.

"ನುಡಿದಡೆ ಮುತ್ತಿನ ಹಾರದಂತಿರಬೇಕು.
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು.
ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು.
ನುಡಿಯೊಳಗಾಗಿ ನಡೆಯದಿದ್ದಡೆ,
ಕೂಡಲಸಂಗಮ ದೇವನೆಂತೊಲಿವನಯ್ಯಾ?"

ಮಾತುಗಳು ಬದುಕಿನಲ್ಲಿ ಭರವಸೆಯನ್ನು ತುಂಬಬೇಕು. ಪ್ರೀತಿ ಮಮಕಾರಗಳಿಂದ ಮಾತುಗಳು ಶ್ರೇಷ್ಠವಾದವುಗಳು. ನಾವಾಡುವ ಮಾತುಗಳು ಯಾರಿಗೂ ನೋವನ್ನುಂಟುಮಾಡಬಾರದು. ನಡೆ-ನುಡಿಗಳು ಒಂದಾದರೆ ಮಾನವ ಮಹಾ ಮಾನವನಾಗುತ್ತಾನೆ. ಬಸವಣ್ಣನವರ ವಚನಗಳಲ್ಲಿ ಅಡಕವಾಗಿರುವ ಮೌಲ್ಯಗಳು ಲೋಕ ಶಿಕ್ಷಣಕ್ಕೆ ಅಡಿಪಾಯವಾಗಿ ಲೋಕ ಕಲ್ಯಾಣಕ್ಕೆ ದಾರಿಯಾಗುತ್ತದೆ.

"ಏನಿ ಬಂದಿರಿ, ಹದುಳಿದ್ದಿರೆ ಎಂದಡೆ
ನಿಮ್ಮ ಮೈಸಿರಿ ಹಾರಿಹೋಹುದೇ? ಕುಳ್ಳಿರೆಂದಡೆ ನೆಲ ಕುಳಿಹೋಹುದೆ?
ಒಡನೆ ನುಡಿದಡೆ ಸಿರ, ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಮೂಗ ಕೊಯ್ವುದ ಮಾಬನೆ ಕೂಡಲಸಂಗಮದೇವಯ್ಯ?"

ದೇವರು ಸುಂದರವಾದ ಜಗತ್ತನ್ನು ಸೃಷ್ಟಿಸಿದ್ದಾನೆ. ಈ ಜಗತ್ತಿನಲ್ಲಿ ಮಾನವನಾಗಿ ಹುಟ್ಟಿದ್ದು ಒಂದು ಪುಣ್ಯದ ಕಾರ್ಯವಾಗಿದೆ. ಇತರ ಪ್ರಾಣಿಗಿಲ್ಲದ ಅರಿವು ಮಾನವರಿಗಿದೆ. ಅದನ್ನು ಮರೆತು ಇಂದು ಮಾನವ ಬದುಕುತ್ತಿದ್ದಾನೆ. ಹಣ, ಅಧಿಕಾರ, ಕಾಮನೆ, ಸ್ವಪ್ರತಿಷ್ಠೆಗಳ ಮೂಲಕ ಪ್ರಕೃತಿಯನ್ನು ನಾಶ ಮಾಡುತ್ತಿದ್ದಾನೆ. ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ಎಲ್ಲವನ್ನು ಮರೆಯಲಾಗುತ್ತದೆ. ನಮ್ಮ ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ ಇತರ ರಕ್ತ ಸಂಬಂಧಿಗಳ ಜೊತೆಗೆ ಉತ್ತಮ ಬಾಂಧವ್ಯವಿಲ್ಲ. ನೆರೆಹೊರೆಯವರ ಪರಿಚಯವೇ ಇಲ್ಲ. ವ್ಯಕ್ತಿಗತ ಸ್ವಾರ್ಥ ಬದುಕನ್ನು ಊಹಿಸಿಕೊಳ್ಳಲು ಸಾಧ್ಯವಾಗದೆ ಸಮಾಜವು ಅಧಃಪತನವಾಗುತ್ತಲಿದೆ.

"ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವನೊಲಿಸುವ ಪರಿ."

ಬಸವಣ್ಣನವರ ಈ ವಚನ ಸಪ್ತನೀತಿ ಸಂಹಿತೆಯಾಗಿದೆ. ಅಂತರಂಗ ಶುದ್ಧಿಯನ್ನು ಹೇಗೆ ಮಾಡಿಕೊಳ್ಳಬೇಕು ಸತ್ಪಥದಲ್ಲಿ ಸಾಗುತ್ತ ನುಡಿದಂತೆ ನಡೆಯುವ ಸಾಮರ್ಥ್ಯ ನಡೆದಂತೆ ನುಡಿಯುವ ಚೈತನ್ಯವನ್ನು ನಮ್ಮಲ್ಲಿರಿಸಿಕೊಂಡಾಗ ನಾವು ದೇವರನ್ನು ಕಾಣಬಹುದು. ಮಾನವ ಇತರ ಪ್ರಾಣಿಗಳಿಗಿಂತ ಭಿನ್ನವೆನಿಸಿದರೂ ಇನ್ನೂ ಪ್ರಾಣಿ ಸಹಜವಾದ ನಡವಳಿಕೆಗಳನ್ನು ಹೊಂದಿರುವನು ಸುಖ-ದುಃಖ ನೋವು-ನಲಿವು ಹಸಿವು-ತೃಷೆ ಕಾಮ-ಪ್ರೇಮ ಇಂತಹ ವಿಚಾರಗಳಲ್ಲಿ ಕೂಡ ಇನ್ನು ಪ್ರಾಣಿಗಳಂತೆ ವರ್ತಿಸುತ್ತಾನೆ. ಕಾಡು ಮಾನವ ನಾಡು ಮಾನವನಾದ ಮೇಲೆ ಮಾನವನ ಆಲೋಚನಾ ಲಹರಿಗಳು ಬದಲಾಗುತ್ತಾ ಬಂದಿವೆ. ನಾಡಿನಲ್ಲಿ ಶಿವಶರಣರು ದಾರ್ಶನಿಕರು ಸಂತರು ಅನುಭಾವಿಗಳು ಸಮಾಜ ಚಿಂತಕರು ತಮ್ಮ ಆದರ್ಶಯುತ ಬದುಕಿನ ಮೂಲಕ ಬಾಳಿ ಸಮಾಜವನ್ನು ಬೆಳಗಿಸಿದ್ದಾರೆ. ಜನಸಾಮಾನ್ಯರ ಬದುಕಿಗೆ ನೈತಿಕ ಅರಿವನ್ನು ಮೂಡಿಸಿದ್ದಾರೆ.

ಲೋಕ ಕಲ್ಯಾಣದ ಹಾದಿಯನ್ನು ಹಿಡಿದ ಶಿವಶರಣರು ಬಸವಣ್ಣನವರ ವಚನಕ್ರಾಂತಿಯಲ್ಲಿ ಪಾಲ್ಗೊಂಡರು. ಜಾತಿ, ವರ್ಗ, ಲಿಂಗ ಬೇಧವಿಲ್ಲದೆ ಸಮಾಜದಲ್ಲಿ ಸಮಾನತೆ ತರುವುದರ ಮೂಲಕ ಜನರಲ್ಲಿ ಶರಣ ಸಂಸ್ಕೃತಿಯನ್ನು ಪಸರಿಸಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಬದಲಾವಣೆ ತಂದರು. ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟ ಅಸಮಾನತೆಯನ್ನು ಕಿತ್ತು ಹಾಕಲು ವೈಚಾರಿಕವಾಗಿ ಜನರಲ್ಲಿ ಪ್ರಜ್ಞೆ ಮೂಡಿಸಿದರು. ಬಸವಣ್ಣನವರು ತಮ್ಮ ಮೌಲ್ಯಗಳ ಮೂಲಕ ಕಾಲ ದೇಶಗಳಿಗೆ ಸೀಮಿತಗೊಳಿಸದೇ ವಿಶ್ವವ್ಯಾಪಿಯಾಗಿ ಹರಡಿದರು. ದರ್ಶನಗಳ ಮೂಲಕ ಶೈಕ್ಷಣಿಕವಾಗಿ, ಸಾಂಸ್ಕೃತಿವಾಗಿ ಸಮಾಜ ವಿಜೃಂಭಿಸಿದರೆ ಇಡೀ ಸಮಾಜದ ಜನರು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತದೆ.

ವಿಶ್ವದಲ್ಲಿ ಹಲವಾರು ಜೀವರಾಶಿಗಳನ್ನು ನಾವು ಕಾಣುತ್ತೇವೆ. ಎಲ್ಲಾ ಪ್ರಾಣಿಗಳಿಗಿಂತ ಮಾನವ ಶ್ರೇಷ್ಠನಾಗಿದ್ದಾನೆ. ಮಾನವನು ಮಾನವೀಯತೆಯನ್ನು ಸಂಪಾದಿಸಿ ಮಾನವನಾಗಿ ಬಾಳಿ ಬೆಳಗಬೇಕಾದರೆ ಅವನಿಗೆ ಜ್ಞಾನವೇ ಮೂಲ ಕಾರಣವಾಗುತ್ತದೆ. ಮಾನವನು ತನ್ನ ಬುದ್ಧಿವಂತಿಕೆಯಿಂದಲೇ ಇತರ ಪ್ರಾಣಿಗಳಿಗಿಂತ ಭಿನ್ನವಾಗಿದ್ದಾನೆ

ISSN: 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಾನವನನ್ನು ಹೊರೆತುಪಡಿಸಿ ಉಳಿದ ಪ್ರಾಣಿಗಳು ಎಷ್ಟೇ ಬಲಶಾಲಿಯಾಗಿದ್ದರೂ ಜ್ಞಾನವಿರುವುದಿಲ್ಲ. ಸಮಾಜದ ಧರ್ಮ ನೀತಿ ಸಂಸ್ಕೃತಿಯ ಅರಿವಿರುವುದಿಲ್ಲ. ಆಹಾರ ನೀರಡಿಕೆ ನಿದ್ರೆ ಭಯ ಸಂಕೋಚ ಮೈಥುನ ಮುಂತಾದವು ಪಶುಪಕ್ಷಿ ಹಾಗೂ ಮಾನವರಿಗೂ ಸಮಾನವಾಗಿರುತ್ತವೆ ಆದರೆ ಮನಷ್ಯನಿಗೆ ಮಾತ್ರ ವಿಶಿಷ್ಟವಾಗಿ ಲಭಿಸಿರುವ ಜ್ಞಾನದ ರತ್ನವೇ ಇರುತ್ತದೆ ಇಂತಹ ಜ್ಞಾನದ ಬಲದಿಂದ ಅಜ್ಞಾನವನ್ನು ಹೋಗಲಾಡಿಸಿ ಇತರ ಎಲ್ಲಾ ಜೀವರಾಶಿಗೆ ನಾಯಕನಾಗುತ್ತಾನೆ. ಲೋಕದಲ್ಲಿ ಬುದ್ದಿವಂತನು ಬಲವಂತನಾಗುತ್ತಾನೆ ಬುದ್ಧಿಯಿಲ್ಲದವನು ಆನೆಯಷ್ಟು ಬಲವಿದ್ದರೂ ಅದು ಉಪಯೋಗವಿಲ್ಲ ಜ್ಞಾನದ ಬಲದ ಮುಂದೆ ಶಕ್ತಿಯ ಬಲ ದುರ್ಬಲವಾಗುತ್ತದೆ ತನ್ನ ಮಹತ್‌ಜ್ಞಾನದ ಮೂಲಕ ಯಾವುದೇ ಕಾರ್ಯ ಮಾಡಲು ಯಶಸ್ವಿಯಾಗುತ್ತಾನೆ. ಜ್ಞಾನದಿಂದಲೇ ಮೋಕ್ಷ ಇದರಿಂದಲೇ ಅವನ ಪಾಪವು ಸುಟ್ಟು ನಾಶವಾಗುವುದು ಲೋಕದಲ್ಲಿ ಜ್ಞಾನಿಯಾದವನು ಶ್ರೇಷ್ಠನಾಗುತ್ತಾನೆ ಅಜರಾಮರವಾದ ಕೀರ್ತಿಯನ್ನು ಹೊಂದುತ್ತಾನೆ ಇವನಿಗೆ ಸಮಾನರಾದವರು ಯಾರೂ ಸಿಗುವುದಿಲ್ಲ.

"ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ,
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ,
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ,
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ,
ಕೂಡಲ ಸಂಗನ ಶರಣರ ಅನುಭಾವದ ಬಲದಿಂದ
ಎನ್ನ ಭವದ ಕೇಡು ನೋಡಯ್ಯಾ."

ಮಾನವನು ಜ್ಞಾನಿಯಾದರೆ ಅಜ್ಞಾನದ ಕೆಟ್ಟ ಕೆಲಸಗಳೆಲ್ಲ ದೂರವಾಗಿ ಅವನು ಮನುಷ್ಯತ್ವವನ್ನು ಪಡೆದುಕೊಳ್ಳುತ್ತಾನೆ. ಮನುಷ್ಯನು ಉತ್ತಮ ಜ್ಞಾನಿಯಾಗಬೇಕಾದರೆ ಅವನಿಗೆ ಯೋಗ್ಯವಾದ ಸಮಾಜದ ಸಂಸ್ಕಾರ ಬೇಕಾಗುತ್ತದೆ. ಇಂದು ನಾವು ನಡೆಯುವ ಹಾದಿಯಲ್ಲಿ ಹಲವಾರು ಅಡತಡೆಗಳಿವೆ ಅವುಗಳಲ್ಲಿ ಪ್ರಮುಖ ಅಡತಡೆಯಲ್ಲಿ ಶಿಕ್ಷಣವು ಕೂಡಾ ಆಗಿದೆ. ಶಿಕ್ಷಣದ ಬಗೆಗೆ ನಾವು ಹೊಂದಿರುವ ಕಲ್ಪನೆಗಳೇ ಬೇರೆಯಾಗಿವೆ. ಶಿಕ್ಷಣ ಕುರಿತು ನಮ್ಮ ಮನದಲ್ಲಿ ಮೂಡಿರುವ ಕಲ್ಪನೆಗಳು ಗಟ್ಟಿಯಾದ ಗೋಡೆಯನ್ನು ನಿರ್ಮಿಸಿವೆ. ನಿಜವಾದ ಶಿಕ್ಷಣದ ಸ್ವರೂಪವನ್ನು ಮರೆಮಾಚಿರುವ ಇಂತಹ ಗೋಡೆಗಳನ್ನು ಗುರುತಿಸಿ ಅರ್ಥ ಮಾಡಿಕೊಂಡಾಗ ಅವುಗಳನ್ನು ಮೀರಿದ ಹೊಸ ಹಾದಿಗಳು ನಮ್ಮ ಕಲ್ಪನೆ ಹಾಗೂ ಆಲೋಚನೆಗೆ ಸಿಗುತ್ತವೆ ಎಂಬುದು ಆಶಾದಾಯಕವಾದ ವಾಸ್ತವ ಸತ್ಯವಾಗಿದೆ. ಮಾನವನು ತನ್ನ ಇತಿಹಾಸದುದ್ದಕ್ಕೂ ತನ್ನ ಬದುಕಿನ ಸತ್ಯವನ್ನು ಅರಿಯಲು ಮಾಡಿದ ಸತತ ಪ್ರಯತ್ನಗಳಿಂದ ಅಭಿವ್ಯಕ್ತಿಯಲ್ಲಿ ಸೂಕ್ತ ದಾರಿಯನ್ನು ಕಾಣಬಹುದಾಗಿದೆ.

ಬಸವಣ್ಣನವರ ಯಾವುದೇ ವಚನವನ್ನು ತೆಗೆದುಕೊಂಡರು ಅದು ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ ಎಂಬ ಸಂದೇಶ ನೀಡುತ್ತದೆ. ಬಸವಣ್ಣನವರು ತನ್ನದೇ ಅರಿವಿನ ಹಣತೆಯ ಮೂಲಕ ಸಮಾಜಕ್ಕೆ ಬೆಳಕು ನೀಡಲು ಪ್ರಯತ್ನಿಸಿದ್ದಾರೆ ತನ್ನ ಶುದ್ಧಿಯಿಂದ ಸಮಾಜದ ಶುದ್ಧಿಯೆಂದು ನಂಬಿದ್ದಾರೆ. ವೃತ್ತಿ ಘನತೆ, ವ್ಯಕ್ತಿ ಘನತೆ ಹಾಗೂ ಸಾಮಾಜಿಕ ಸಮಾನತೆ ಪರಿಪಕ್ವ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ. ಸಮಾಜದ ಆಳಕ್ಕಿಳಿದು ಪೂರ್ವಾಪರಗಳನ್ನು ವಿಚಾರಿಸಿದ ಇವರು ನಿತ್ಯ ಚಲನಶೀಲ ಗುಣದ ಒಂದು ಪ್ರಗತಿಪರ ನವ ಸಮಾಜವನ್ನು ನಿರ್ಮಿಸಲು ಹೊರಟಿದ್ದು ಮಾನವ ಇತಿಹಾಸದಲ್ಲಿ ಅಪರೂಪದ ಸಾಂಸ್ಕೃತಿಕ ಕೊಡುಗೆಯಾಗಿದೆ.

"ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ,
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ."

ಇಲ್ಲಿರುವ ಒಂದೊಂದು ನುಡಿಗಳು ಜನರ ಬದುಕನ್ನು ಕಟ್ಟಿಕೊಳ್ಳಲು ಸಹಾಯಕವಾಗಿವೆ. ಗುರು-ಹಿರಿಯರನ್ನು ಗೌರವದಿಂದ ಕಾಣುವುದಿಲ್ಲ, ಒಳ್ಳೆಯವರಿಗೆ ಸಹಾಯ ಮಾಡುವುದಿಲ್ಲ. ಇಂತಹ ಬದುಕು ನಮಗೆ ಬೇಡವಾಗಿದೆ ಬಸವಣ್ಣನವರು ಲೋಕದ ಡೊಂಕ ತಿದ್ದುವ ಮುನ್ನ ತಮ್ಮ ತನು-ಮನಗಳನ್ನು ತಿದ್ದಿಕೊಂಡರು. ಮೊದಲು ತಾನು ಸರಿಯಾದರೆ ಸಮಾಜ ಸರಿಯಾಗುವುದು ತಾನೇ ಸರಿಯಾಗದೇ ಇನ್ನೊಬ್ಬರ ಡೊಂಕನ್ನು ತಿದ್ದಲು ಸಾಧ್ಯವಿಲ್ಲ ಇದು ಇವರ ಲೋಕದೃಷ್ಟಿ. ಶರಣರ ಬದುಕು ಅಂದಿಗೆ ಮಾತ್ರವಲ್ಲ ಇಂದಿಗೂ ಅವಶ್ಯಕವಾಗಿದೆ.

"ಎನಗಿಂತ ಕಿರಿಯರಿಲ್ಲ.
ಶಿವಶರಣರಿಗಿಂತ ಹಿರಿಯರಿಲ್ಲ
ನಿಮ್ಮ ಪಾದಸಾಕ್ಷಿ ನನ್ನ ಮನಸಾಕ್ಷಿ
ಕೂಡಲ ಸಂಗಮದೇವ ಎನಗಿದೆ ದಿಟ"

ಶರಣರಲ್ಲಿ ಕಾಣುವ ನಿರಹಂಕಾರ ಭಾವನೆ ಮತ್ತು ನಮ್ರತೆಯ ಗುಣ ಅನನ್ಯವಾದದ್ದು ಒಬ್ಬರು ಮತ್ತೊಬ್ಬರನ್ನು ಶಿವಸ್ವರೂಪಿಯೆಂಬಷ್ಟು ಗೌರವದಿಂದ ಕಾಣುತ್ತದೆ. ಆಧ್ಯಾತ್ಮ ಪ್ರಗತಿಗೆ ಅಡ್ಡಿ ಬರುವ ಅಹಂಕಾರವನ್ನು ಗೆಲ್ಲಲು ಸಾಧಕನಾದವನು ತುಂಬ ಶ್ರಮಿಸಬೇಕಾಗುತ್ತದೆ. ಆದ್ದರಿಂದ ಬಸವಣ್ಣ ತನ್ನ ನಿರಹಂಕಾರ ನಿಲುವನ್ನು ಅಂತಃ ಸಾಕ್ಷಿಯಾಗಿ ಹೇಳುವ ವಚನವಾಗಿದೆ.

## ಶೈಕ್ಷಣಿಕ ಶೋಧಗಳು

1. ಇನ್ನೊಬ್ಬರಿಗೆ ಉಪದೇಶ ಮಾಡುವ ಮುನ್ನ ನಾವೇ ಮೊದಲು ಆತ್ಮಾವಲೋಕನ ಮಾಡಿಕೊಳ್ಳಬೇಕು.
2. ಪ್ರತಿಯೊಬ್ಬರಲ್ಲಿ ಅದ್ಭುತವಾದ ಶಕ್ತಿಯಿದೆ ಅದನ್ನು ಶಿಕ್ಷಣದ ಮೂಲಕ ಸದುಪಯೋಗಪಡಿಸಿಕೊಳ್ಳಬೇಕು.
3. ಅಹಂಕಾರಿಗಳಾಗದೆ ವಿನಯವಂತರು ಹಾಗೂ ಮಾನವೀಯ ಗುಣವುಳ್ಳವರಾಗಬೇಕು.
4. ತಂದೆ-ತಾಯಿಗಳ, ಗುರುಗಳ ಹಾಗೂ ಸಮಾಜದ ಋಣ ತೀರಿಸುವ ಕಾರ್ಯ ಕೈಗೊಳ್ಳಬೇಕು.
5. ನೈತಿಕ ನೆಲೆಗಟ್ಟಿನ ಮೇಲೆ ತಮ್ಮ ಬದುಕನ್ನು ಕಟ್ಟಿಕೊಳ್ಳುವ ಕೆಲಸವನ್ನು ಮಾಡಬೇಕು.
6. ಶಿಕ್ಷಣದಲ್ಲಿ ಅಡ್ಡಿ ಆತಂಕಗಳನ್ನು ಪ್ರಾಮಾಣಿಕವಾಗಿ ಅರಿತು ಪರಿಹಾರಗಳನ್ನು ಕಂಡುಕೊಳ್ಳಬೇಕು.
7. ಶಿಕ್ಷಣದ ಸರ್ವತೋಮುಖ ಅಭಿವೃದ್ಧಿಯನ್ನು ವಚನ ಸಾಹಿತ್ಯದ ನೆಲೆಯಲ್ಲಿ ಕಂಡುಕೊಳ್ಳಬೇಕು.
8. ಎಲ್ಲವು ನಮ್ಮೊಳಗೆ ಇರುವಾಗ ಎಲ್ಲೋ ಹೊರಗೆ ಹುಡುಕುವ ಅವಶ್ಯಕತೆ ಇಲ್ಲವೆಂಬ ಅರಿವು ಮೂಡಬೇಕು.
9. ದಿನನಿತ್ಯ ಜೀವನದ ಸ್ಥಿತಿಗತಿಗಳು ನಮ್ಮ ಮನಸ್ಸಿನಲ್ಲಿ ಮೂಡುವ ಸಂಗತಿಗಳು ಸಮಾಜದಲ್ಲಿ ಇರುವ ಜ್ಞಾನ ಸಂಪತ್ತು ನಮ್ಮೆಲ್ಲಾ ಸಂಬಂಧಗಳು ಕಲಿಕೆಯ ವ್ಯಾಪ್ತಿಯಲ್ಲಿ ಬರುತ್ತವೆ.
10. ಬಸವಣ್ಣನವರ ಬಹುಮುಖ್ಯ ಸಾಧನೆ ಸಾಮಾಜಿಕ ಮೌಢ್ಯಗಳನ್ನು ತೊಡೆದು ಹಾಕುವುದು.
11. ಬಸವಣ್ಣನವರು ಮೊದಲು ಬಾಹ್ಯ ನಂತರ ಆಂತರಿಕ ಶುಚಿತ್ವಕ್ಕೆ ಹೆಚ್ಚು ಮಹತ್ವ ನೀಡಿದರು.
12. ನಾಡಿನ ಸಾಂಸ್ಕೃತಿಕ ಪರಂಪರೆಯ ಬಗೆಗೆ ಅರಿವು ಮೂಡುವುದು.
13. ಧರ್ಮ, ಜಾತಿ, ಲಿಂಗ ಹಾಗೂ ಭಾಷೆಗಳ ಮೇಲೆ ಆಧಾರಿತವಾಗಿರುವ ಪೂರ್ವಾಗ್ರಹ ಮನೋಭಾವನೆಯಿಂದ ದೂರವಿರುವುದು.

14. ವಿಶ್ವ ಭ್ರಾತೃತ್ವ ಮನೋಭಾವನೆಯನ್ನು ಬೆಳೆಸುವುದು.
15. ಪ್ರತಿಯೊಬ್ಬ ಮಾನವರು ಸಮಾನರು ಇಲ್ಲಿ ಯಾರೂ ಮೇಲು-ಕೀಳಲ್ಲ ಎಂಬ ಭಾವನೆ ಬೆಳೆಸುವುದು.

## ಉಪಸಂಹಾರ

ಭಾವ ಶುದ್ಧಿಯ ಬೆಳಕಿನಲ್ಲಿ ಅಂತರಂಗದ ಚಿನ್ನವನ್ನು ಶೋಧಿಸಿದ ಬಸವಣ್ಣನವರು ಮಾನವ ಜೀವನದ ಮೌಲ್ಯಗಳಿಗೆ ಹೊಸ ಜೀವ ಕಳೆಯನ್ನು ತಂದ ಧೀಮಂತ ಶಕ್ತಿಯಾಗಿದ್ದಾರೆ. ನಿತ್ಯ ಬದುಕಿನ ಸತ್ಯದ ಅರಿವಿನಿಂದ ಸಾಮಾಜಿಕ ನೀತಿಗಳ ಶೋಧನೆಯಿಂದ ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂಬಂಧಗಳ ಗೌರವ ಭಾವನೆಯಿಂದ ಆತ್ಮ ವಿಮರ್ಶೆಯ ಅಲೌಕಿಕ ಅನುಭಾವದಿಂದ ಮಹಾ ಮಾನವರಾಗಿ ಕಂಗೊಳಿಸಿದ್ದಾರೆ. ಪ್ರತಿಯೊಂದು ಕಾಯಕದಲ್ಲಿ ಜ್ಞಾನದ ಅವಶ್ಯಕತೆಯು ಇರುವುದರಿಂದ ಧರ್ಮ, ರಾಜಕಾರಣ, ವ್ಯವಹಾರ, ಕರಕುಶಲತೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ನಡೆ-ನುಡಿಯ ಮೂಲಕ ಗೆಲುವು ಸಾಧಿಸುವರು. ಮಾನವನ ಶರೀರ ಮನಸ್ಸು ಬುದ್ಧಿ ಶುದ್ಧಿಯಾಗುವುದು ಜ್ಞಾನದ ಮೂಲಕ ಆದ್ದರಿಂದ ಬಸವಣ್ಣನವರು ಅರಿತರೆ ಶರಣ ಮರತರೆ ಮಾನವನಾಗುತ್ತಾನೆ. ನಮ್ಮ ಪ್ರಚಲಿತ ಶಿಕ್ಷಣದ ಸಮಸ್ಯೆಗಳಿಗೆ ಇರುವ ಕಾರಣ ಹಾಗೂ ಪರಿಹಾರಗಳನ್ನು ಹುಡುಕಲು ಜ್ಞಾನದ ಗಣಿಯಾಗಿರುವ ಬಸವಣ್ಣನವರ ವಚನಗಳಲ್ಲಿ ಹುಡುಕಬಹುದಾಗಿದೆ. ಬಸವಣ್ಣನವರ ವಚನಗಳಲ್ಲಿ ಲೋಕ ಶಿಕ್ಷಣದ ಪರಿಕಲ್ಪನೆಗೆ ಸಂಬಂಧಿಸಿದ ವಚನಗಳ ಮೂಲಕ ಶರಣರು ಸಾಮಾಜಿಕ ಬದುಕನ್ನು ಗುರುತಿಸಿ ನಮ್ಮ ಪ್ರಸ್ತುತ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಶರಣರ ವಚನಗಳ ಕಣಜ ಎಂದೂ ತೀರದ ಅರಿವಿನ ಸಂಪತ್ತಾಗಿದೆ ಅವರ ಒಂದೊಂದು ವಚನಗಳು ನಮ್ಮ ಜೀವನದ ದೀಪವಾಗಿವೆ ಇವು ಒಂದು ರೀತಿಯ ರಹಸ್ಯವನ್ನು ತನ್ನ ಒಡಲಲ್ಲಿರಿಸಿಕೊಂಡು ಬಂದ ಮಾತುಗಳು ಜ್ಞಾನದ ಹಸಿವನ್ನು ಜನಸಾಮಾನ್ಯರಿಗೆ ಆಧುನಿಕ ಕಾಲದಲ್ಲಿಯೂ ಇಡೀ ವಿಶ್ವದ ಮನುಕುಲಕ್ಕೆ ದಿಕ್ಸೂಚಿಯಾಗಿ ನಿಂತಿರುವುದು ನಮ್ಮ ನಾಡಿನ ಭಾಗ್ಯವಾಗಿದೆ. ನಾವು ಎಲ್ಲರನ್ನೂ ಪ್ರೀತಿಯಿಂದ ಕಾಣಬೇಕು ಪ್ರತಿಯೊಂದು ಕೆಲಸವನ್ನು ದೇವರ ಕೆಲಸವೆಂದು ಸತ್ಯ ಶುದ್ಧವಾಗಿ ಶ್ರದ್ಧಾ ಭಕ್ತಿಯಿಂದ ಮಾಡಬೇಕು ಆಗ ನಮ್ಮ ಬದುಕು ಬದಲಾಗುತ್ತದೆ. ಎಲ್ಲಾ ಕಡೆಗೆ ಪ್ರೀತಿ-ಪ್ರೇಮ ನೆಲೆಸುತ್ತದೆ ಇದುವೆ ದೈವೀ ಸಾಮ್ರಾಜ್ಯವಾಗುತ್ತದೆ, ಕಲ್ಯಾಣ ರಾಜ್ಯವಾಗುತ್ತದೆ, ಬಸವಾದಿ ಶರಣರು ಕಂಡ ಕಲ್ಯಾಣ ರಾಜ್ಯದ ಕನಸು ನನಸಾಗುತ್ತದೆ.

## ಆಕರ ಗ್ರಂಥಗಳು


- ಬಸವನಾಳ ಶಿವಲಿಂಗಪ್ಪ (1990) : ಬಸವಣ್ಣನವರ ಷಟ್‌ಸ್ಥಳದ ವಚನಗಳು, ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ.
- ಸಬರದ ಬಸವರಾಜ (1992) : ವಚನ ಚಳುವಳಿ. ಗುಲಬುರ್ಗಾ ಪಲ್ಲವಿ ಪ್ರಕಾಶನ.
- ಹಿರೇಮಠ ಚಂದ್ರಶೇಖರಶಾಸ್ತ್ರಿ (2010) : ಬಸವತತ್ತ್ವ ರತ್ನಾಕರ. ಧಾರವಾಡ ಶ್ರೀ ಮುರಾಘಾಮಠ.
- ಕಣವಿ ಚೆನ್ನವೀರ (1999) : ವಚನಾಂತರಂಗ, ಚಿತ್ರದುರ್ಗ ಬಸವಕೇಂದ್ರ ಶ್ರೀ ಮುರಘ ರಾಜೇಂದ್ರಮಠ.
- ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು (2019) : ಸಮ ಸಮಾಜದ ಕನಸು. ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾಸಂಘ (ರಿ).
- ಸಾದರ ಬಸವರಾಜ (ಅಕ್ಟೋಬರ್ 2017) : ಸಂಪುಟ:20 ಸಂಚಿಕೆ:03 ಬೆಂಗಳೂರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು.



**Form - IV**

(See Rule 8)

**Statement Showing the Ownership of**

**DIMENSIONS OF EDUCATION**

A English Quarterly Education and Research Journal

1. Place of Publication : Gadag
2. Periodicity of Publication : Quarterly
3. Printer's Name (Wether Citizen of India) : Vishal Prints, Station Road, Near Mahendrakar Circle, Gadag Karnataka State (India)
4. Publisher's Name (Wether Citizen of India : Jayadev Karnataka State (India)
5. Editor's Name : Dr. N. B. Kongawad
6. Name of Address of Individual Own : Jayadev M. Menasagi, Okkalageri Oni, Gadag. Karnataka State (India)

I Jayadev M. Menasagi hereby declare that the particular given above are true to the best of my knowledge and belief.

7-3-2020

Jayadev
Signature of the Publishers


J.P. COLLEGE OF EDUCATION GADAG 582101

PRINCIPAL
J.P. College of Education
GADAG-582101